# ಸಾಕ್ರಟೀಸನ ಸಾಲ

ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ಬದುಕಿದ್ದ ಸಾಕ್ರಟೀಸ್ ಇಂದಿಗೂ ಮನುಷ್ಯನ ಸಾಕ್ಷೀಪ್ರಜ್ಞೆಯ ಸಂಕೇತದಂತೆ ಇತಿಹಾಸದಲ್ಲಿ ಜೀವಂತವಾಗಿದ್ದಾನೆ. ಯೂರೋಪ್ ಖಂಡದ 'ಶಾರದಾ ಪೀಠ'ವೆನ್ನಿಸಿಕೊಂಡಿದ್ದ ಗ್ರೀಸ್ ದೇಶದ ಅಥೆನ್ಸ್ ನಗರದಲ್ಲಿ ಎಪ್ಪತ್ತು ವರ್ಷಗಳ ಕಾಲ ಜೀವಿಸಿದ್ದ ಸಾಕ್ರೆಟೀಸ್ ಆ ಕಾಲದ ಬಹುದೊಡ್ಡ ಚಿಂತಕ, ಜಿಜ್ಞಾಸು ಹಾಗೂ ವಿಚಾರ ವಾದಿ ಎಂದು ಖ್ಯಾತನಾಗಿದ್ದ. ಅಂಧಶ್ರದ್ಧೆ, ಡಂಭಾಚಾರ– ಮುಂತಾದವುಗಳ ಪರಮ ವಿರೋಧಿಯಾಗಿದ್ದ. ಎಲ್ಲ ವಿಚಾರಗಳನ್ನೂ ಬುದ್ಧಿಯ ಒರೆಗಲ್ಲಿಗೆ ಉಜ್ಜಿ ಪರೀಕ್ಷಿಸಿದ ನಂತರವೇ ಸ್ವೀಕರಿಸಬೇಕೆಂಬುದು ಆತನ ಖಚಿತ ನಿಲವು. ಮನುಷ್ಯ ತನ್ನ ಅಂತಸ್ಸಾಕ್ಷಿಯನ್ನೇ ಅವಲಂಬಿಸಿ ಬದುಕಬೇಕೆಂದು ಸಾರುತ್ತಿದ್ದ ಸಾಕ್ರಟೀಸ್, ತನ್ನ ಸ್ವಂತ ಜೀವನದಲ್ಲೂ ಅದೇ ತತ್ವವನ್ನು ಅಳವಡಿಸಿಕೊಂಡಿದ್ದ. ಆತನ ವೈಚಾರಿಕ ಮನೋಧರ್ಮದಿಂದಾಗಿ ಅಥೆನ್ಸ್ ನಗರದ ಬಹಳಷ್ಟು ಯುವಕರು ಆತನ ಅಭಿಮಾನಿಗಳಾದರು; ಶಿಷ್ಯರಾದರು. ಆದರೆ ಆತನ ನಿಷ್ಠುರ ನಿರ್ದಾಕ್ಷಿಣ್ಯ ಪ್ರವೃತ್ತಿ ಸಂಪ್ರದಾಯ ವಾದಿಗಳನ್ನೂ, ಪಟ್ಟಭದ್ರರನ್ನೂ ಕಸಿವಿಸಿಗೊಳಿಸಿತು. ಹೀಗಾಗಿ ಆತ ಅಥೆನ್ಸಿನ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾಗುವಂತಾಯಿತು. ಪೂರ್ವಾಚಾರಗಳನ್ನು ಧಿಕ್ಕರಿಸುತ್ತಾನೆಂದೂ, ಯುವಕರನ್ನು ದಾರಿ ತಪ್ಪಿಸಿಸುತ್ತಾನೆಂದೂ ಸಾಕ್ರಟೀಸನ ಮೇಲೆ ಆರೋಪ ಹೊರಿಸಲಾಯಿತು. ಆತ ದೋಷಿಯೆಂದು ತೀರ್ಮಾನವಾಗಿ, ಮರಣ ದಂಡನೆಯನ್ನು ವಿಧಿಸಲಾಯಿತು. ನ್ಯಾಯಾಲಯದ ತೀರ್ಪಿನ ಪ್ರಕಾರ ಸಾಕ್ರಟೀಸ್ ಸೆರಮನೆಯಲ್ಲಿಯೇ ಹೆಮ್ಲಾಕ್ ಎಂಬ ಕಠೋರ ವಿಷವನ್ನು ಸೇವಿಸಿ, ಮರಣಕ್ಕೆ ಒಳಗಾಗಬೇಕಾಗಿತ್ತು. ಆತ ಅಂಥದೊಂದು ತೀರ್ಪಿಗೆ ಮಾನಸಿಕವಾಗಿ ಸಿದ್ಧನಾಗಿಯೇ ಇದ್ದ. ಸಾವಿನಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡುವ ಯಾವ ವಾಮಮಾರ್ಗಕ್ಕೂ ಆತ ಸಮ್ಮತಿಸಲಿಲ್ಲ. ನಿರ್ವಿಕಾರ ಮನಸ್ಸಿನಿಂದ ವಿಷ ಸೇವಿಸಿದ. ಇನ್ನೇನು, ಸಾವಿನ ಅಂಚಿನಲ್ಲಿದ್ದಾಗ ತಾನು ಯಾವುದೋ ಒಂದು ಸಂದರ್ಭದಲ್ಲಿ ತನ್ನ ನೆರೆಯವನಿಂದ ಒಂದು ಹುಂಜವನ್ನು ಸಾಲವಾಗಿ ಪಡೆದಿದ್ದುದನ್ನು ಹಿಂದಿರುಗಿಸಲಿಲ್ಲವೆಂದು ಥಟ್ಟನೆ ನೆನಪಾಯಿತು. ತನ್ನೊಂದಿಗಿದ್ದ ಶಿಷ್ಯ ಕ್ರಿಟೋವಿಗೆ ಆ ಸಾಲವನ್ನು ಹಿಂತಿರುಗಿಸುವಂತೆ ಕೇಳಿಕೊಂಡು ಆತ ನಿರಾಳ ಭಾವದಿಂದ ಮೃತ್ಯುವಿಗೆ ತನ್ನನ್ನು ಒಪ್ಪಿಸಿಕೊಂಡ.

ಸಾವನ್ನು ಎದುರಿಸಬೇಕಾಗಿದ್ದ ಉತ್ಕಟ ಸನ್ನಿವೇಶದಲ್ಲಿ ಸಾಕ್ರಟೀಸ್ ನೆನಪು ಮಾಡಿಕೊಂಡದ್ದು– ನಮಗೆ ಅತ್ಯಂತ ಕ್ಷುಲ್ಲಕವೆಂದು ತೋರುವ– ಇಂಥದೊಂದು ಸಾಲವನ್ನು. ಅದನ್ನು ಆತ ಹಿಂತಿರುಗಿಸದೇ ಹೋಗಿದ್ದರೆ ಯಾವುದೇ ಪ್ರಮಾದ ಆಗುತ್ತಿರಲಿಲ್ಲ; ಆತನನ್ನು ಮರಣೋತ್ತರ ವಿಚಾರಣೆಗೆ ಯಾರೂ ಒಳಪಡಿಸುತ್ತಿರಲಿಲ್ಲ. ಪ್ರಾಯಶ ಸಾಲ ಕೊಟ್ಟಾತನಿಗೇ ಆ ಸಂಗತಿ ಮರೆತು ಹೋಗಿದ್ದೀತು. ಆದರೆ ಸಾಕ್ರಟೀಸ್ ಮಾತ್ರ ಅದನ್ನು ಮರೆಯಲಿಲ್ಲ. ಆತನ ಅಂತಸ್ಸಾಕ್ಷಿ ಆತನಲ್ಲಿ ಸದಾ ಎಚ್ಚರವಾಗಿತ್ತು. ಹೀಗಾಗಿ ಇಂಥದೊಂದು ಸಾಲವನ್ನು ಹಿಂತಿರುಗಿಸಬೇಕಾದುದು ತನ್ನ ನೈತಿಕ ಹೊಣೆ ಎಂಬ ಅರಿವು ಮೃತ್ಯುಮುಖದಲ್ಲಿದ್ದಾಗಲೂ ಅವನಲ್ಲಿರಲು ಸಾಧ್ಯವಾಯಿತು. ಇದನ್ನೇ 'ಋಣ ಪ್ರಜ್ಞೆ' ಎನ್ನುವುದು, ಇನ್ನೊಬ್ಬರಿಂದ ಪಡೆದ ಸಾಲವನ್ನೋ, ಉಪಕಾರವನ್ನೋ ನೆನಪಿನಲ್ಲಿಡದವರು 'ಸಾಕ್ರಟೀಸನ ಸಾಲ'ದ ಪ್ರಸಂಗ ಕೇಳಿ ನಕ್ಕುಬಿಡಬಹುದು. ಸಾಮಾನ್ಯ ಜನರಿಗೆ ಸಾಲವನ್ನು ಹಿಂತಿರುಗಿಸಬೇಕಾದ ಪ್ರಸಂಗ ಬಂದಾಗ 'ಕಿಬ್ಬದಿಯ ಕೀಲು ಮುರಿದ' ಅನುಭವವಾಗುತ್ತದೆ ಎನ್ನುತ್ತಾನೆ ಸರ್ವಜ್ಞ ಕವಿ. ಸಾಲ ಪಡೆಯುವಾಗ ಮಾಡಿಕೊಂಡ ಕರಾರು, ಒಪ್ಪಂದ ಎಲ್ಲವನ್ನು ಧಿಕ್ಕರಿಸಿ, ಅಗತ್ಯ ಬಿದ್ದರೆ ಕಾನೂನಿನಿಂದ ನುಣುಚಿಕೊಳ್ಳುವ 'ಸಾಹಸಿ'ಗಳೂ ಸಾಕಷ್ಟು ಸಂಖ್ಯೆಯಲ್ಲಿರುವುದನ್ನು ನೋಡುತ್ತಿರುತ್ತೇವೆ. ಅಂಥವರ ಪಾಲಿಗೆ ಅಂತಸ್ಸಾಕ್ಷಿಯ ಕಾಟವಿರುವುದಿಲ್ಲವೇನೋ!

'ಋಣ ಪ್ರಜ್ಞೆ' ಎಂಬುದು ಹಣಕಾಸಿನ ರೂಪದ ಅಥವಾ ವಸ್ತು ರೂಪದ ಸಾಲಕ್ಕಷ್ಟೇ ಸೀಮಿತವಲ್ಲ. ಇಂಥವೆಲ್ಲ ಲೌಕಿಕ ಋಣಗಳು. ಅವುಗಳಲ್ಲದೆ ಅಭೌತಿಕವಾಗಿರುವ, ಭಾವನಾ ಪ್ರಪಂಚಕ್ಕೆ ಸಂಬಂಧಿಸಿರುವ ಅಲೌಕಿಕ ಋಣಗಳೂ ಇವೆ. ಇವುಗಳನ್ನು ನಮ್ಮ ಹಿರಿಯರು ದೇವ ಋಣ, ಪಿತೃ ಋಣ, ಋಷಿ ಋಣ ಎಂದು ಹೆಸರಿಸಿ 'ಋಣತ್ರಯ'ಗಳೆಂದು ಕರೆದಿದ್ದಾರೆ. 'ಋಣ ಪ್ರಜ್ಞೆ' ಎಂಬುದನ್ನು ಒಂದು ಹಿರಿದಾದ ಜೀವನ ಮೌಲ್ಯವೆಂದು ನಮ್ಮ ಪ್ರಾಚೀನರು ಭಾವಿಸಿದ್ದರೆಂಬುದಕ್ಕೆ ಇದು ನಿದರ್ಶನ. ಇವುಗಳ ಜೊತೆಗೆ ಇನ್ನೆಷ್ಟೋ ಬಗೆಯ ಜ್ಞಾತ, ಅಜ್ಞಾತ ಋಣಗಳೂ ನಮ್ಮ ಮೇಲಿವೆ. ನಮಗೆ ಗೊತ್ತಿದ್ದೋ, ಇಲ್ಲದೆಯೋ ಇತರರಿಂದ ನಾವು ಹಲವು ರೀತಿಯಲ್ಲಿ ಉಪಕಾರ ಪಡೆದಿರುತ್ತೇವೆ. ಅಂಥವರಿಗೆ ಪ್ರತ್ಯುಪಕಾರ ಮಾಡಲು ಸಾಧ್ಯವಾಗದಿದ್ದರೂ, ಅವರು ಮಾಡಿದ ಉಪಕಾರವನ್ನು ಸ್ಮರಿಸಿ, ಕೃತಜ್ಞರಾಗಿರಬಹುದಲ್ಲವೆ? ಆದರೆ ಎಷ್ಟೋಬಾರಿ ನಾವು ಇನ್ನೊಬ್ಬರಿಂದ ಪಡೆದ ಉಪಕಾರವನ್ನು ಸುಲಭವಾಗಿ ಮರೆಯುತ್ತೇವೆ; ಅವರು ಮಾಡಿರಬಹುದಾದ ಒಂದು ಸಣ್ಣ ಅಪಕಾರವನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಿರುತ್ತೇವೆ. ಇತರರ ಅನೇಕ ಅಪಕಾರಗಳನ್ನು ಮರೆತು, ಅವರು ಮಾಡಿದ ಅತ್ಯಂತ ಚಿಕ್ಕ ಉಪಕಾರವನ್ನು ನೆನಪಿಸಿಕೊಳ್ಳುತ್ತಿರುವುದು ಶ್ರೀರಾಮನ ಸ್ವಭಾವನಾಗಿತ್ತೆಂದು ವಾಲ್ಮೀಕಿ ವರ್ಣಿಸುತ್ತಾರೆ. ಹಿರಿಯರಿಂದ ಪಡೆದ ವಾತ್ಸಲ್ಯ, ಜೊತೆಯವರ ಸ್ನೇಹ, ಕೌಟುಂಬಿಕ ಪ್ರೀತಿ, ಮಕ್ಕಳಿಂದ ಪಡೆದ ಹಿಗ್ಗು– ಇಂಥವೆಲ್ಲವೂ ನಮ್ಮ ಪಾಲಿನ ತೀರಿಸಲಾಗದ ಸಾಲಗಳಲ್ಲವೆ? ಆದ್ದರಿಂದಲೇ ಕವಿ ಜಿಎಸ್‌ಎಸ್– ನಮ್ಮೆಲ್ಲರ ಬದುಕನ್ನು 'ಋಣದ ರತ್ನಖನಿ' ಎಂದಿರುದು.

■ ವೈನತೇಯ

## ಮಾತೇ ಮುತ್ತು

★ ಕುಟುಂಬದವರ ಎದುರು ಹೆಂಡತಿ ಜತೆ ಲಲ್ಲೆ ಮಾತುಗಳ ಸರಸ ಸರಿ ಅಲ್ಲವೆಂದು ತಿಳಿದು ಸುಮ್ಮನಿದ್ದುಬಿಟ್ಟರೆ, ಹೆಂಡತಿ ಕಟ್ಟಿಗೆ ಬೊಂಬೆ ತರಹ ನಿರ್ಲಿಪ್ತಳೂ ಭಾವನಾರಹಿತಳೂ ಆಗುತ್ತಾಳೆ.

–ಸಂಚಿ ಹೊನ್ನಮ್ಮ

★ ಸೋಮಾರಿತನವು ಮನುಷ್ಯರ ಶರೀರದೊಳಗೇ ಇರುವ ದೊಡ್ಡ ಶತ್ರು. ಹಾಗೆಯೇ ಕಾಯಕಕ್ಕೆ ಸಮನಾದ ಬಂಧುವೂ ಅಲ್ಲ. ಕೆಲಸ ಮಾಡುತ್ತಿರುವವನು ಎಂದೂ ಕೆಡುವುದಿಲ್ಲ.

–ನೀತಿಶತಕ

★ ಮೊಲೆ ಮೂಡಿ ಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು; ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ! ರಾಮನಾಥ.

–ಜೇಡರ ದಾಸಿಮಯ್ಯ

★ ಹೂವಿನ ಆಡಂಬರವನ್ನು ಕಂಡು ಒಳ್ಳೆಯ ಹಣ್ಣು ದೊರೆಯುವುದೆಂಬ ಆಸೆಯಿಂದ ಮಾವಿನ ತೋಪನ್ನು ಕಡಿದು ಮುತ್ತುಗದ ಮರಗಳನ್ನು ಬೆಳೆಸಿ ನೀರೆರೆದರೆ ಏನಾಗುವುದು? ಫಲಪ್ರಾಪ್ತಿಯ ಕಾಲದಲ್ಲಿ ಹಣ್ಣಿಲ್ಲವೆಂದು ವ್ಯಥೆ ಪಡಬೇಕಾಗುವುದು.

–ರಾಮಾಯಣ

★ ಬೇರೆಯವರ ಅನುಭವದಿಂದ ಮನುಷ್ಯ ಕಲಿಯಲು ಮುಂದಾಗುವುದಿಲ್ಲ. ಸ್ವತಃ ಅವನು ಡಿಕ್ಕಿ ಹೊಡೆದಾಗ ಮಾತ್ರ ಎಚ್ಚರಗೊಳ್ಳುವನು.

–ವಿನೋಬಾ ಭಾವೆ

★ ನರಿಯು ಉಪದೇಶ ಮಾಡಲು ಬಂದಾಗ, ಕೋಳಿಗಳ ಮೇಲೆ ಕಣ್ಣಿರಲಿ.

–ಅಲ್ಬೇನಿಯಾ ಗಾದೆ

★ ಆತ್ಮ ಪ್ರಶಂಸಕರನ್ನು, ದುರಭಿಮಾನಿಗಳನ್ನು, ಸ್ವತಃ ಜಿಪುಣತೆ ತೋರುವವರನ್ನು ಮತ್ತು ಇತರರನ್ನು ಜಿಪುಣತೆಗೆ ಪ್ರೇರೇಪಿಸುವವರನ್ನು ಅಲ್ಲಾಹನು ಮೆಚ್ಚುವುದಿಲ್ಲ.

–ಕುರಾನ್

★ ಕೈಶುದ್ಧಿ, ವಾಕ್‌ಶುದ್ಧಿ, ಮನ ಶುದ್ಧಿ ಉಳ್ಳವನು ಮತ್ತಾವುದರ ಬಗೆಗೂ ಚಿಂತಿಸಬೇಕಾದುದಿಲ್ಲ.

–ಕನ್‌ಫ್ಯೂಶಿಯಸ್

★ ವಿನಾ ಕಾರಣ ಸಂತೋಷವಾಗಿರುವುದು, ಸದಾ ಕ್ರಿಯೆಯಲ್ಲಿ ನಿರತನಾಗಿರುವುದು, ಯಾವುದೇ ಅಹಂಕಾರವಿಲ್ಲದೆ ಸಣ್ಣಪುಟ್ಟ ವಸ್ತುಗಳಿಗೆ ಬೇಡಿಕೆ ಸಲ್ಲುವುದು– ಈ ಮೂರು ಗುಣಗಳನ್ನು ಚಿಕ್ಕ ಮಗುವನ್ನು ನೋಡಿ ಕಲಿಯಬೇಕು.

–ಅಜ್ಞಾತ